# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## P.C.R.No. 405/2025

| | | |
|---|---|---|
| **ಹೆಸರುಃ** | **ಧರ್ಮೇಗೌಡ** | **CW-1** |
| **ತಂದೆ/ಗಂಡ ಹೆಸರುಃ** | **ನಿಂಗೇಗೌಡ** | |
| **ವಯಸ್ಸುಃ** | **65 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ತಂಬಲಗೆರೆ ಗ್ರಾಮ** | **ದಿನಾಂಕಃ06.04.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

ಸಾಕ್ಷಿಯ ಸ್ವ ಖುಷಿ ಹೇಳಿಕೆ .

ನನಗೆ ಸ ನಂ 57/1 ರಲ್ಲಿ 1 ಎಕರೆ 32 ಗುಂಟೆ ಜಮೀನು ತಂಬಲಗೆರೆ ಗ್ರಾಮದಲ್ಲಿ ಇರುತ್ತದೆ. ಅದು ನನ್ನ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಜಮೀನು ನನ್ನದ್ದೇ ಆಗಿರುತ್ತದೆ. ಅದರಲ್ಲಿ 29 ಗುಂಟೆ ಜಮೀನನ್ನು 3 ನೇ ಆರೋಪಿ ಕ್ರಯಕ್ಕೆ ಕೊಡಿ ಎಂದು ಕೇಳಿದಾಗ ನಾನು ಕೊಟ್ಟಿರುವುದಿಲ್ಲ. ನನಗೆ 3 ಹೆಣ್ಣು ಮಕ್ಕಳು ಇದ್ದು ಅವರಿಗೆ ಮದುವೆಯಾಗಿರುತ್ತದೆ. 2024 ರಲ್ಲಿ 3ನೇ ಆರೋಪಿ ನನ್ನ ಜಮೀನಿನಲ್ಲಿ 25 ಚೀಲ ಕಾಫಿ ಕುಯ್ಯುದಿರುತ್ತಾರೆ. ತೀರ್ಮಾನ ಮಾಡುತ್ತೇವೆಂದು ಹೇಳಿದ್ದರಿಂದ ನಾನು 15-20 ದಿನ ಬಿಟ್ಟಿರುತ್ತೇನೆ.

ಆನಂತರ ಅವರು ಚೌಡಮ್ಮ ದೇವಿಗೆ ಹಾಕಿದ್ದರು. ಅಲ್ಲಿ ನಾನು ಜಮೀನು ಕೊಡಲು ಆಗುವುದಿಲ್ಲ ಎಂದು ಹೇಳಿದ್ದೆ. ದಿಃ 05.06.2025 ರಲ್ಲಿ 3 ನೇ ಆರೋಪಿ

ನಮ್ಮ ಜಮೀನಿಗೆ ಬಂದು ಸರ್ವೆ ಕಲ್ಲು ಮತ್ತು ಬೇಲಿಯನ್ನು ಕಿತ್ತು ಹಾಕಿರುತ್ತಾರೆ. ಆನಂತರ ನಾನು ಸರ್ವೆ ಮಾಡಿಸಿರುತ್ತೇನೆ. ಆನಂತರ ದೂರು ನೀಡಿರುತ್ತೇನೆ. ಪೊಲೀಸರು ನಾವು ತೀರ್ಮಾನ ಮಾಡಲು ಆಗುವುದಿಲ್ಲ. ನೀವೇ ಬಗೆಹರಿಸಿಕೊಳ್ಳಿ ಎಂದು ಹೇಳಿದ್ದರು. ಆನಂತರ ಆರೋಪಿತರು ಬಂದು 25-30 ಕಾಫಿ ಗಿಡಗಳನ್ನು ಕಡಿದಿರುತ್ತಾರೆ. ನನ್ನ ಪತ್ನಿ ಲಲಿತಾ ರವರು ಕೇಳಿದಾಗ , ಆರೋಪಿತರು ಜಮೀನನ್ನು ಬಿಡಲು ಆಗುವುದಿಲ್ಲ ಎಂದು ಹೇಳಿದರು. ಆ ಸಮಯದಲ್ಲಿ ನಾನು ಯಸಳೂರಿಗೆ ಹೋಗಿದ್ದೆ. ನನ್ನ ಪತ್ನಿ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ನಾನು ನನ್ನ ಚಿಕ್ಕಪ್ಪನ ಮಕ್ಕಳಿಗೆ ತಿಳಿಸಿರುತ್ತೇನೆ. ಅವರು ಸ್ದಳಕ್ಕೆ ಬಂದು ಮೊಬೈಲ್ ನಲ್ಲಿ ವಿಡಿಯೋ ಮಾಡಿ ಪೋಟೋ ತೆಗೆದಿರುತ್ತಾರೆ. ನನ್ನ ಮಗಳು ಲಕ್ಷಿತಾ ಮತ್ತು ಅಳಿಯ ವಿಶ್ವಾಸ ರವರು ಬಂದು ಕೇಳಿದರೂ ಸಹ ಆರೋಪಿತರು ಒಪ್ಪಿರುವುದಿಲ್ಲ. ಆನಂತರ ನಾನು ಪೊಲೀಸ ದೂರು ನೀಡಿರುತ್ತೇನೆ. ಪೊಲೀಸರು ಸ್ದಳಕ್ಕೆ ಬಂದು ವಿಚಾರ ಮಾಡಿ ನ್ಯಾಯಾಲಯದಲ್ಲಿ ತೀರ್ಮಾನಿಸಿಕೊಳ್ಳುವಂತೆ ಹೇಳಿರುತ್ತಾರೆ.

ಪುನಃ ನಾವು ಯಸಳೂರು ಠಾಣೆಯಲ್ಲಿ ದೂರು ನೀಡಿರುತ್ತೇವೆ. ಆದರೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಮರುದಿನ ಹೋದರು ಸಹ ದೂರು ದಾಖಲು ಮಾಡಿಕೊಂಡಿರುವುದಿಲ್ಲ. ನಾವು ಪೊಲೀಸ ರಕ್ಷಣೆ ಬೇಕು ಎಂದು ಹೇಳಿ ಪೊಲೀಸ ಅಧೀಕ್ಷಕರಿಗೆ ದೂರು ನೀಡಿರುತ್ತೇನೆ. ಪೊಲೀಸರು ಸ್ದಳಕ್ಕೆ ಬಂದು ವಿಚಾರಣೆ

ಮಾಡಿರುತ್ತಾರೆ. ಆನಂತರ ಅವರು ಹಿಂಬರಹ ನೀಡಿರುತ್ತಾರೆ. ಆದ್ದರಿಂದ ನ್ಯಾಯಾಲಯದಲ್ಲಿ ಈ ಪ್ರಕರಣ ದಾಖಲು ಮಾಡಿರುತ್ತೇನೆ. ಆನಂತರದಲ್ಲಿ ಆರೋಪಿತರು ಕೋವಿಯನ್ನು ತೆಗೆದುಕೊಂಡು ಬಂದು ಜಾಗವನ್ನು ಬಿಡಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ನ್ಯಾಯಾಲಯದಲ್ಲಿ ಈ ಪ್ರಕರಣ ದಾಖಲು ಮಾಡಿರುತ್ತೇನೆ.

ನಾನು ಈ ಸಂಬಂಧ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

1. ಸ ನಂ 51/1 ರ ಪಹಣಿಯನ್ನು ನಿ.ಸಿ.- 1 ಎಂದು ಗುರುತಿಸಲಾಯಿತು.

2. ದಿಃ 05.06.2025 ರ ಯಸಳೂರು ಠಾಣೆಯ ಸ್ವೀಕೃತಿಯನ್ನು ನಿ.ಸಿ.- 2 ಎಂದು ಗುರುತಿಸಲಾಯಿತು.

3. ದಿಃ 10.06.2025 ರ ಪೊಲೀಸ ಅಧೀಕ್ಷಕರು , ಹಾಸನ ದವರಿಗೆ ನೀಡಿದ ದೂರನ್ನು ನಿ.ಸಿ.- 3 ಎಂದು ಗುರುತಿಸಲಾಯಿತು.

4. ಅಂಚೆ ರಶೀದಿಯನ್ನು ನಿ.ಸಿ.- 4 ಎಂದು ಗುರುತಿಸಲಾಯಿತು.

**ಮುಂದುವರೆದ ಸ್ವ ಖುಷಿ ಹೇಳಿಕೆಗೆ ಕಾಲಾವಕಾಶ ಕೇಳಿದ್ದು ನೀಡಿ ಮುಂದುಡಲಾಯಿತು.**
**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**